O.S. ನಂಬರಃ 77/2017
ಡಿ. ಡಬ್ಲ್ಯೂಃ 1

ದಿಃ 06-03-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ವಾದಿಯ ಪರ ವಕೀಲರಾದ ಶ್ರೀ ಎಂ.ಎ.ಆರ್ ರವರಿಂದಃ

ನನ್ನ ಮನೆಯು ಅವರ್ಸಾದ ದಂಡೇಭಾಗದಲ್ಲಿರುತ್ತದೆ. ದಾವಾ ಆಸ್ತಿಯು ಅವರ್ಸಾ ಕವಲಗದ್ದೆಯಲ್ಲಿ ಇರುತ್ತದೆ ಎಂದರೆ ಸರಿ. ದಂಡೆಭಾಗದಿಂದ ಕವಲಗದ್ದೆಯು ಸುಮಾರು ಒಂದೂವರೆ ಕಿ.ಮೀ ಆಗಬಹುದು. 2 ನೇ ದಾವಾ ಆಸ್ತಿಯು ವಾದಿಯರ ತಾಬಾದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. 2010 ನೇ ಸಾಲಿನತಕವೂ ನಾವು ಯಾವುದೇ ಕಬ್ಜಾ ವಹಿವಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಗಂಡನಾದ ಶ್ರೀಪಾದ ಪಾವಸ್ಕರ ಮತ್ತು ನನ್ನ ತಂದೆಯು ದೋಸ್ತರು ಎಂದರೆ ಸರಿಯಲ್ಲ. ನಮಗೆ ಯಾವದೇ ಅಡಚಣೆ ಇದ್ದರೆ ಅವರಿಂದ ಪಡೆದುಕೊಳ್ಳುತ್ತಿದ್ದೇವು ಎಂದರೆ ಸರಿಯಲ್ಲ.

2. ದಿಃ08-11-1990 ರಂದು ನನ್ನ ತಾಯಿ ಮತ್ತು ನಾವೆಲ್ಲರೂ ಸೇರಿ 2 ನೇ ವಾದಿಗೆ 2 ನೇ ದಾವಾ ಆಸ್ತಿಯನ್ನು ರೂ.1,600/- ಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಕರಾರು ಪತ್ರ ಮಾಡಿದ ದಾಖಲೆಯು ಮೂಲ ದಾವಾ ನಂ.81/2011 ರಲ್ಲಿ

ಸಿಂಧು ಆಗಿರುತ್ತದೆ ಎಂದರೆ ಸರಿಯಲ್ಲ.  ಅದು ಟ್ರಿಬುನಲ್ ಗೆ ಸಂಬಂಧಪಟ್ಟ ಜಮೀನು ಆದ ಕಾರಣ 1999 ರಲ್ಲಿ ನಮ್ಮ ಹೆಸರು ಬಂದಿರುತ್ತದೆ ಎಂದರೆ ಸರಿಯಲ್ಲ.

3. ಉಮೇಶ ನಾಯಕ ನನ್ನ ಅಣ್ಣನಾಗಬೇಕು. 2008 ರಲ್ಲಿ 1 ನೇ ವಾದಿಯ ಹೆಸರಿಗೆ ಜಮೀನನ್ನು ಮಾಡಿಸಿಕೊಡುತ್ತೇನೆ ಎಂದು 10 ಸಾವಿರವನ್ನು ಪಡೆದುಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಆತನು ಜಮೀನಿನ ಸಂಬಂಧಿತವಾಗಿ ನೊಂದಣಿ ಮಾಡಿಸಿಕೊಡುತ್ತೇನೆ ಎಂದು ಹೇಳಿದ್ದು, ಆದರೆ ನಾನೇ ತಕರಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ.  ಅಷ್ಟರಲ್ಲಿ ಉಮೇಶ ನಾಯಕ ಇವರು ತೀರಿಕೊಂಡ ನಂತರ ವಾದಿಯಿಂದ ಪಡೆದುಕೊಂಡ ದುಡ್ಡನನ್ನು ಇಟ್ಟುಕೊಂಡು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ನನ್ನ ತಾಯಿ ಹಾಗೂ ಉಮೇಶ ನಾಯಕ ಇವರು ದುಡ್ಡನ್ನು ಪಡೆದುಕೊಂಡು ಈಗ ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ.  ನಮ್ಮ ದಾದಾಗಿರಿಯಿಂದ 1 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಆ ಜಾಗದಲ್ಲಿ ನಮ್ಮ ಮನೆಯನ್ನು ಕಟ್ಟಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.  ದಾವಾ 1 ಮತ್ತು 2 ಆಸ್ತಿಗಳು ಒಂದೇ ಕಂಪೌಂಡನಲ್ಲಿ ಇದ್ದಿದ್ದರಿಂದ ಇದೂವರೆಗೂ ಗಡಿ ಗುರುತು ಆಗಿ, ನಮ್ಮ ಜಮೀನು ಪ್ರತ್ಯೇಕವಾಗಿರುವುದಿಲ್ಲ ಎಂದರೆ ಸಾಕ್ಷಿಯು 2 ಸಲ ಸರ್ವೆ ಆಗಿರುತ್ತದೆ ಎಂದು ನುಡಿಯುತ್ತಾರೆ.  ಅಲ್ಲಿ ಯಾವುದೇ ಗಡಿ ಗುರುತು ಇರುವುದಿಲ್ಲ ಎಂದರೆ ಸರಿಯಲ್ಲ.  ವಾದಿಗೆ ಸಂಬಂಧಪಟ್ಟ 1 ನೇ ದಾವಾ

ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ಒಂದು ಪೊಟೋವನ್ನು ತೋರಿಸಲಾಗಿ ಅದರಲ್ಲಿ ಕಟ್ಟಿರುವ ನಿಮ್ಮ ಮನೆಯ ಮುಕ್ಕಾಲುಭಾಗ ವಾದಿಯರ ಜಾಗದಲ್ಲಿ ಬರುತ್ತಿದ್ದು, ಕಾಲುಭಾಗ ಮಾತ್ರ ನಮ್ಮ ಜಾಗದಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಪೋಟೋದಲ್ಲಿ ಕಾಣಿಸುತ್ತಿರುವ ಸದರಿ ಮನೆಯನ್ನು 1 ನೇ ವಾದಿ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪೊಟೋವನ್ನು ನಿಪಿ-7 ಮತ್ತು ಸಿಡಿಯನ್ನು ನಿಪಿ-8 ಎಂದು ಗುರುತಿಸಲಾಯಿತು. ನಿಮ್ಮ ಹೆಸರಿಗೆ ಕೇವಲ ಎರಡೂವರೆ ಗುಂಟೆ ಜಮೀನು ಇದ್ದು, 1 ನೇ ಪ್ರತಿವಾದಿಗೆ ಮೂರೂವರೆ ಗುಂಟೆ ಮಾರಾಟ ಮಾಡಿರುವುದಾಗಿ ಹೇಳಿರುತ್ತಾಳೆ ಎಂದರೆ ಸರಿಯಲ್ಲ. 1 ಎ ರಿಂದ 1 ಸಿ ಪ್ರತಿವಾದಿಯರು ಅಲ್ಲಿ ಹೋಗಿ ದಾದಾಗಿರಿ ಮಾಡುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಅವರು ವಾದಿಯರ ಜಮೀನಿನಲ್ಲಿಯೂ ಸಹ ಅತಿಕ್ರಮಣ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾವು ಮತ್ತು ಅವರು ಸೇರಿಕೊಂಡು ವಾದಿಯರ ಕಬ್ಜಾ ವಹಿವಾಟಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. 2 ನೇ ದಾವಾ ಆಸ್ತಿಯ ಮಾರುಕಟ್ಟೆಯ ಬೆಲೆ ಹೆಚ್ಚಾಗಿಸಿದ್ದರಿಂದ ಮಾರಾಟ ಮಾಡುವ ಉದ್ದೇಶ ಹೊಂದಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ 1 ನೇ ಪ್ರತಿವಾದಿಯೇ ದಾದಾಗಿರಿ ಮಾಡಿಕೊಂಡು ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ 1 ನೇ ಪ್ರತಿವಾದಿಯು ನಮ್ಮ ಕುಮ್ಮಕ್ಕಿನ ಮೇರೆಗೆ ಸಾಧಾರಣವಾಗಿ ಒಂದರಿಂದ ಒಂದೂರವರೆ ಗುಂಟೆ ವಾದಿಯ ಜಮೀನನ್ನು ಅತಿಕ್ರಮಣ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

4. ವಾದಿಯರು 1 ಲಕ್ಷವನ್ನು ಕೊಡುತ್ತಾರೆ 2 ನೇ ದಾವಾ ಆಸ್ತಿಯನ್ನು ವಾದಿಯರ ಹೆಸರಿಗೆ ಮಾಡಿಕೊಡಿ ಎಂದರೆ ಸಾಕ್ಷಿಯು ಆಗುವುದಿಲ್ಲ ಎಂದು ನುಡಿಯುತ್ತಾರೆ. ಈ ರೀತಿಯ ಪ್ರಪೋಸಲನ್ನು ಕೊಟ್ಟಾಗ ನಾನು ಉಳಿದ ಪ್ರತಿವಾದಿಯರ ಒಟ್ಟಿಗೆ ಮಾತನಾಡಿಕೊಂಡು ಹೇಳುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. 1 ನೇ ವಾದಿಗೆ ವಯಸ್ಸಾಗಿದ್ದರಿಂದ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ರೀತಿ ತೊಂದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಹಾಗೂ 2 ನೇ ದಾವಾ ಆಸ್ತಿಯು ವಾದಿಯರ ಕಬ್ಜೆಯಲ್ಲಿ ಇದ್ದರೂ ಸಹ ಅವರಿಗೆ ವಿನಾ ಕಾರಣ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ಕೋಮಾರಪಂಥ ಜನರ ಸಂಖ್ಯೆ ಜಾಸ್ತಿಯಾಗಿದ್ದು, ಕಾರಣ ವಾದಿಯರ ಮೇಲೆ ದಾದಾಗಿರಿ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸರ್ವೆ ಮಾಡಿದರೆ ಗಡಿ ಗುರುತು ಗೊತ್ತಾಗುತ್ತದೆ ಎಂದರೆ ಸಾಕ್ಷಿಯು ಸರ್ವೆ ಮಾಡಿಸಬಹುದು ಎಂದು ನುಡಿಯುತ್ತಾರೆ. ನಾವು ಒಂದೂವರೆ ಗುಂಟೆ ಜಾಗವನ್ನು ಅತಿಕ್ರಮಣ ಮಾಡಿಕೊಂಡು ಕಟ್ಟಿರುವ ಮನೆಯನ್ನು ವಾದಿಯರಿಗೆ ಬಿಟ್ಟುಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ವಿನಾ ಕಾರಣ ವಾದಿಯರ ಮೇಲಿರುವ ದ್ವೇಷದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.